ಮಾಡುತ್ತಿರುವಾಗಲಾಗಲೀ ಎಲ್ಲೋ ಅಲ್ಲೊಮ್ಮೆ ಇಲ್ಲೊಮ್ಮೆ ಚೂರು ಪಾರು ಪೋರ್ನ್ ನೋಡಿದ್ದು ಬಿಟ್ಟರೆ, ಛೆ, ಒಂದು ಹುಡುಗಿಯ ಸಂಗವನ್ನೂ ಮಾಡಲಿಲ್ಲವಲ್ಲಾ!

ತಕ್ಷಣ ಫೇಸ್‌ಬುಕ್‌ಗೆ ಲಾಗಿನ್ ಆಗಿ ಕಾನ್‌ಟ್ಯಾಕ್ಟ್ ಲಿಸ್ಟ್‌ನಲ್ಲಿರುವ ತನ್ನ ಆಫೀಸಿನಲ್ಲಿನ ಹುಡುಗಿಯರನ್ನೆಲ್ಲಾ ಜಾಲಾಡಿದ. ಯಾರ್‍ಯಾರು ಈ ಹೊತ್ತಿನಲ್ಲಿ ಇನ್ನೂ ಎದ್ದಿದ್ದಾರೆ ಎಂದು ಕುತೂಹಲದಿಂದ ಚಾಟ್ ಲಿಸ್ಟ್‌ನಲ್ಲಿ ನೋಡಿದರೆ, ಸುಮಾರು ಹೆಸರಿನ ಪಕ್ಕ ಹಸಿರು ಕಣ್ಣು ಪಿಳಿಪಿಳಿಯೆನ್ನುತ್ತಿತ್ತು. ಒಂದು ಸಲ ಮೇಲಿಂದ ಕೆಳಗೆ ಸ್ಕ್ರೋಲ್ ಮಾಡಿ ನೋಡುವಷ್ಟರಲ್ಲಿ, ಇದೀಗ ಹೊಸದಾಗಿ ಸೇರಿದ್ದ ಬೆಂಗಾಲಿ ಬೀನಾ ಸೇನ್, 'ಹೇಯ್, ಸ್ಟಿಲ್ ಅವೇಕ್?' ಎಂದು ಟೈಪಿಸಿದ್ದು ಕಾಣಿಸಿ, 'ಯೆಪ್ಪಾ!' ಅವನ ಹೃದಯ ಹುಚ್ಚೆದ್ದು ಕುಣಿಯಿತು. ಹಿಮಾಲಯದ ತುತ್ತತುದಿಯನ್ನೇರಿ ಒಂಟಿಕಾಲಿನಲ್ಲಿ ನಿಂತು ಇಡೀ ಬ್ರಹ್ಮಾಂಡವನ್ನೇ ಸರಿದೂಗಿಸುತ್ತಿರುವ ಬ್ರಹ್ಮನಂತಹ ಸ್ಥಿತಪ್ರಜ್ಞೆಯಲ್ಲಿ, ತನ್ನ ಉತ್ಸಾಹದ ಒಂದಿನಿತೂ ತುಣುಕದ ಮಹಾ ನಿರುತ್ಸಾಹದಿಂದ 'ಯ್ಯಾ!...' ಎಂದಷ್ಟೇ ಉತ್ತರಿಸಿ ಕಾದ. 'ಗಾಟ್ ಟು ನೋ ಅಬೌಟ್ ಯುವರ್ ಜರ್ಮನಿ ಟೂರ್ ಅಟ್ ಟೀಮ್ ಔಟಿಂಗ್. ವೆನ್ ಆರ್ ಯು ಲೀವಿಂಗ್?' ಎಂಬ ಪ್ರಶ್ನೆ ಪಕಪಕಾಂತ ಸ್ಕ್ರೀನ್ ಮೇಲೆ ಮೂಡಿದ್ದೇ ಉಬ್ಬಿದ್ದ ಮನಸ್ಸು ಸರ್‍ರಂತ ವಿಪರೀತ ಗಾಳಿ ತುಂಬಿ ಒಡೆದ ಬಲೂನಿನಂತೆ ಚೂರುಚೂರಾಯಿತು. ಏನೂ ಟೈಪಿಸದೇ ಕೆಲ ಕಾಲ ಸುಮ್ಮನೆ ಕುಳಿತ. ಅವಳೇ ಮತ್ತೇನಾದರೂ ಟೈಪಿಸಬಹುದೆಂದು ಕಾದ. ಎಷ್ಟೊತ್ತಾದರೂ ಯಾವ ಪ್ರತಿಕ್ರಿಯೆ ಬಾರದೆ, ಇನ್ಯಾರ ಜೊತೆಗೋ ಅವಳು ಚಾಟ್ ಮಾಡುತ್ತಿರುವುದು ತಿಳಿದು ಅಸ್ವಸ್ಥನಾದ. ತನ್ನ ಮಾರಣಾಂತಿಕ ಕಾಯಿಲೆ ವಿಷಯ ಅವಳಿಗೆ ತಿಳಿಸಿಬಿಡಲೇ ಎಂದು ಯೋಚಿಸಿದ. ಆದರೆ 'ಲೀವಿಂಗ್ ಶಾರ್ಟ್‌ಲೀ' ಎಂದು ಟೈಪಿಸಿದ. 'ವ್ಹಾಹ್ ಸೋ ನೈಸ್! ಎಕ್ಸೈಟೆಡ್?' ಎಂಬ ಉತ್ತರಕ್ಕೆ 'ಯ್ಯಾ!... ವೆರಿಮಚ್ ಎಕ್ಸೈಟೆಡ್!' ಎಂದು ಯೋಚಿಸುವುದಕ್ಕೆ ಮುಂಚೆಯೇ ಯಾಂತ್ರಿಕವಾಗಿ ಉತ್ತರಿಸಿದ. ಮತ್ತೆ ಅವಳೇ, 'ಎಂಥಾ ಅವಕಾಶ!' ಎಂದೆಳೆದು, ಮತ್ತೇನೋ ಮಾರುದ್ದ ಟಪಟಪಾಂತ ಟೈಪ್ ಮಾಡಿದ್ದನ್ನು ಓದಿ ಮುಗಿಸುವಷ್ಟರಲ್ಲೇ, 'ವಾಟ್ಸ್ ಯುವರ್ ವೀಕೆಂಡ್ ಪ್ಲಾನ್?' ಅಂತ ಪ್ರಶ್ನೆ ಬಿಟ್ಟಳು. 'ನಥಿಂಗ್. ಜಸ್ಟ್ ಗೋಯಿಂಗ್ ಟು ಡೈ!' ಎಂದು

